## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ : 3491/2021**

**ಪಿ ಡಬ್ಲ್ಯೂ - 4**

**ಸಿ ಡಬ್ಲ್ಯೂ - 4**

**ದಿಃ 09.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಮಜರ್ ಅಬ್ಬಾಸ್**

**ತಂದೆಯ ಹೆಸರು ಃ ಮುಮ್ತಾಜ್ ಅಲಿ**

**ವಯಸ್ಸು ಃ 33 ವರ್ಷ**

**ಉದ್ಯೋಗ ಃ ಗಾರೆ ಕೆಲಸ**

**ವಿಳಾಸ ಃ ಒಲವನ ಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು ನಾನು 2021 ರಲ್ಲಿ ಮಾಡಿರುತ್ತೇನೆ. ದಿನಾಂಕ ಸರಿಯಾಗಿ ನೆನಪಿಲ್ಲ. ಸಹಿಯನ್ನು ನಾನು ಗುಮ್ಮನಹಳ್ಳಿಯಲ್ಲಿ ಮಾಡಿರುತ್ತೇನೆ. ಸಹಿಯನ್ನು ನಾನು ಅಪಘಾತವಾದ ಕಾರಣ ಮಾಡಿರುತ್ತೇನೆ. ಸುಮಾರು 11-00 ಗಂಟೆ ಸಮಯದಲ್ಲಿ ಮಾಡಿರುತ್ತೇನೆ. ನನ್ನ ಮುಂದೆ ಅಪಘಾತಕ್ಕೊಳಪಟ್ಟ ಟ್ರ್ಯಾಕ್ಟರ್ ಹಾಗೂ ಟ್ರಾಲಿಯನ್ನು ಅಮಾನತ್ತುಪಡಿಕೊಂಡಿರುತ್ತಾರೆ. ಅದರ ಸಂಖ್ಯೆ ನನಗೆ ನೆನಪಿಲ್ಲ. ಸಾಕ್ಷಿಯು ನಿಪಿ-3 ರಿಂದ 6 ರಲ್ಲಿನ ಟ್ರ್ಯಾಕ್ಟರ್ ಹಾಗೂ ಟ್ರಾಲಿಯ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಸಿ., ವಕೀಲರಿಂದ**

ಪೋಲೀಸರು ನನಗೆ ಪಂಚನಾಗಿ ಬರಲು ನೋಟೀಸ್‌ನ್ನು ಕೊಟ್ಟಿರಲಿಲ್ಲ ಮೌಖಿಕವಾಗಿ ತಿಳಿಸಿದ್ದರು. ಪೋಲೀಸರು ನಮ್ಮ ಮುಂದೆ ವಾಹನದ ಛಾಯಾಚಿತ್ರವನ್ನು ತೆಗೆದಿರಲಿಲ್ಲ. ನಿಪಿ-2 ಕ್ಕೆ ಪೋಲೀಸರು ಸಾಕ್ಷಿಯಾಗಿ ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ರಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.

ಪೋಲೀಸರು ಬರೆದು ತಂದಿದ್ದ ದಾಖಲೆಗೆ ಸಹಿ ಮಾಡು ಎಂದು ತಿಳಿಸಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**